# ಮಾತಿನ ಆರೋಗ್ಯ ಈಗ ಹೇಗಿದೆ?

ಮಾತೆನ್ನುವುದು ಸಂವಹನದ ಮಾಧ್ಯಮ ಮಾತ್ರವಲ್ಲ; ವ್ಯಕ್ತಿಗಳ ನಡುವೆ ಮನುಷ್ಯಸಂಬಂಧಗಳನ್ನು ಬೆಸೆಯುವ ಅಮೃತಮಾಧ್ಯಮವೂ ಹೌದು. ಮನಸ್ಸುಗಳನ್ನು ಬೆಸೆಯಬೇಕಾದ ಮಾತು ಮನಸ್ಸುಗಳನ್ನು ಒಡೆಯುತ್ತಿದೆ. ನಾವು ಆಡುವ ಮಾತು ತನ್ನ ಆರ್ದ್ರತೆಯನ್ನು ಕಳೆದುಕೊಂಡು ಹಗೆಯ ಹೊಗೆಯನ್ನು ಒಳಗೊಳ್ಳುತ್ತಿದೆ.

ಹಬ್ಬವೊಂದರ ಹಿನ್ನೆಲೆಯಲ್ಲಿ ಏನಿರುತ್ತದೆ? ಸಂಭ್ರಮ, ಆಚಾರ, ವಿಚಾರ, ರುಚಿಕರ ಊಟ – ಇವೆಲ್ಲವೂ ಹಬ್ಬದ ಭಾಗ. ಇದರ ಜೊತೆಗೆ ಸೇರಿಸಲೇಬೇಕಾದ ಮತ್ತೊಂದು ಸಂಗತಿ, ‘ಮಾತು’. ಬೇಕಿದ್ದರೆ ಅದನ್ನು ಶುಭಹಾರೈಕೆ ಎನ್ನಿ.

ಹಬ್ಬದ ಸಂಭ್ರಮದಲ್ಲಿ ಬಂಧುಮಿತ್ರರಿಗೆ ಶುಭಾಶಯಗಳನ್ನು ಕೋರುತ್ತೇವೆ. ದಸರೆಯ ಸಂದರ್ಭದಲ್ಲಂತೂ ಬನ್ನಿಪತ್ರೆ ನೀಡಿ ಬಂಗಾರದಂಥ ಮಾತನಾಡುವುದು ವಾಡಿಕೆ. ಈ ಹಿತಕರವಾದ ಮಾತಿನ ನಂಟು ಸಂಕ್ರಾಂತಿ ಸಂಭ್ರಮಕ್ಕೂ ಉಂಟು. ದಸರೆಗೆ ಬನ್ನಿಯಾದರೆ, ಸಂಕ್ರಾಂತಿಗೆ ಎಳ್ಳು–ಬೆಲ್ಲದ ಸ್ಪರ್ಶ. ‘ಎಳ್ಳು–ಬೆಲ್ಲ ತಿಂದು ಒಳ್ಳೆಯ ಮಾತನಾಡು’ ಎನ್ನುತ್ತದೆ ಸಂಕ್ರಾಂತಿ.

ಸಂಕ್ರಾಂತಿ ಸೂರ್ಯನ ಹಬ್ಬ. ಅದು ರೈತರ ಹಬ್ಬವೂ ಹೌದು. ರೈತ ನಮ್ಮೆಲ್ಲರ ಜೀವನಾಡಿಯಾದುದರಿಂದ ಸಂಕ್ರಾಂತಿ, ಜಾತಿ–ಧರ್ಮ–ಪ್ರದೇಶದ ಚೌಕಟ್ಟು ಮೀರಿ ಎಲ್ಲರ ಹಬ್ಬವೂ ಹೌದು. ಸೂರ್ಯ ತನ್ನ ಪಥ ಬದಲಿಸುವ ಸಂಕ್ರಮಣ ಸಂದರ್ಭ, ರೈತಾಪಿವರ್ಗಕ್ಕೆ ಸುಗ್ಗಿಯ ಕಾಲ. ಧಾನ್ಯಗಳ ಕಣ ಮಾಡಿ ಸಂಭ್ರಮಿಸಲು, ಹೊಸ ಧಾನ್ಯಗಳಿಂದ ಹುಗ್ಗಿ ಮಾಡಿ ಹಿಗ್ಗಲು ಸಂಕ್ರಾಂತಿಯೊಂದು ಸಂಧಿಕಾಲ.

ಸೂರ್ಯನಿಗೂ ಸೂರ್ಯಸ್ವರೂಪಿ ರೈತನಿಗೂ ಸಂಕ್ರಮಣ ಕಾಲವಾದ ಸಂಕ್ರಾಂತಿಯನ್ನು ನಾವೆಲ್ಲರೂ ಬದಲಾವಣೆಯ ರೂಪದಲ್ಲಿ ನೋಡಲಿಕ್ಕೆ ಸಾಧ್ಯವಿದೆ. ಈ ಸಂಕ್ರಾಂತಿ ಹೊಸ ವರ್ಷದ ಸಂಕೇತವೂ ಹೊಸ ವರ್ಷದ ಮೊದಲ ಹಬ್ಬವೂ ಹೌದಷ್ಟೇ. ಹಾಗಾಗಿ, ನಮ್ಮ ಬದುಕನ್ನು ಹೊಸತನಕ್ಕೆ ತೆರೆದುಕೊಳ್ಳಲು, ಹೊಸ ಸಂಗತಿಗಳನ್ನು ನಮ್ಮ ಬದುಕಿಗೆ ಅಳವಡಿಸಿಕೊಳ್ಳಲಿಕ್ಕೆ ಸಂಕ್ರಾಂತಿಗಿಂತಲೂ ಮಿಗಿಲಾದ ಸಂದರ್ಭ ಇನ್ನೊಂದುಂಟೇ? ಹೊಸ ವರ್ಷದ ಸಂಕಲ್ಪ ಎನ್ನುತ್ತೇವಲ್ಲ, ಅದನ್ನು ‘ಸಂಕ್ರಾಂತಿ ಸಂಕಲ್ಪ’ ಎಂದೂ ಹೇಳಬಹುದು.

ಮತ್ತೆ ಮಾತಿನ ವಿಷಯಕ್ಕೆ ಬರೋಣ. ಇದು ಬರಿ ಮಾತಲ್ಲ – ಒಳ್ಳೆಯ ಮಾತು. ಕನ್ನಡ ಸಂಸ್ಕೃತಿಯಲ್ಲಿ ಮಾತಿಗೆ ಅಪಾರ ಮಹತ್ವವಿದೆ. ‘ಮಾತೆಂಬುದು ಜ್ಯೋತಿರ್ಲಿಂಗ’ ಎಂದರು ಶರಣರು. ಆಡುವ ಮಾತಿಗೆ ಲಿಂಗ (ದೈವ) ಮೆಚ್ಚಿ ಅಹುದಹುದೆನ್ನಬೇಕು ಎಂದು ಆಶಿಸಿದರು. ಅಂಥ ಮಾತಿನ ಆರೋಗ್ಯ ಈಗ ಹೇಗಿದೆ?

ಮಾತನ್ನು ದೈವಸ್ವರೂಪಿಯಾಗಿ ಕಂಡ ಕನ್ನಡ ಸಂಸ್ಕೃತಿಯಲ್ಲಿ ‘ಮಾತೇ ಮುತ್ತು ಮಾತೇ ಮೃತ್ಯು’ ಎನ್ನುವ ಮಾತೂ ಇದೆ. ವರ್ತಮಾನದಲ್ಲಿ ‘ಮುತ್ತು’ ಕಟ್ಟುವುದು ನಮಗೆ ಸಾಧ್ಯವಾಗುತ್ತಿಲ್ಲ, ಮೃತ್ಯುವಿನ ಛಾಯೆಯನ್ನಂತೂ ಮಾತಿಗೆ ಆರೋಪಿಸುತ್ತಿದ್ದೇವೆ. ಮಾತೆನ್ನುವುದು ಸಂವಹನದ ಮಾಧ್ಯಮ ಮಾತ್ರವಲ್ಲ; ಅದು ವ್ಯಕ್ತಿಗಳ ನಡುವೆ ಮನುಷ್ಯಸಂಬಂಧಗಳನ್ನು ಬೆಸೆಯುವ ಅಮೃತಮಾಧ್ಯಮವೂ ಹೌದು ಎನ್ನುವುದರ ಅರಿವೇ ಇಲ್ಲದಂತೆ ನಡೆದುಕೊಳ್ಳುತ್ತಿದ್ದೇವೆ. ಮನಸ್ಸುಗಳನ್ನು ಬೆಸೆಯಬೇಕಾದ ಮಾತು ಮನಸ್ಸುಗಳನ್ನು ಒಡೆಯುತ್ತಿದೆ. ನಾವು ಆಡುವ ಮಾತು ತನ್ನ ಆರ್ದ್ರತೆಯನ್ನು ಕಳೆದುಕೊಂಡು ಹಗೆಯ ಹೊಗೆಯನ್ನು ಒಳಗೊಳ್ಳುತ್ತಿದೆ. ಎದುರಿನ ವ್ಯಕ್ತಿಯಲ್ಲಿ ಆಪ್ತಭಾವ ಮೂಡಿಸಬೇಕಾದ ಮಾತು ಆಕ್ರೋಶ ಮೂಡಿಸುತ್ತಿದೆ.

ಜನಸಾಮಾನ್ಯರ ಮಾತಿರಲಿ, ರಾಜಕಾರಣಿಗಳಂತೂ ಮಾತಿನ ಕಿಮ್ಮತ್ತು ಕಳೆಯುವುದನ್ನೇ ರಾಜಕಾರಣ ಎಂದುಕೊಂಡಿರುವಂತಿದೆ. ಸಾರ್ವಜನಿಕವಾಗಿ ಅವರು ಆಡುತ್ತಿರುವ ಮಾತುಗಳು ಅವರನ್ನು ಆರಿಸಿದ ಪ್ರಜೆಗಳು ಲಜ್ಜೆಯಿಂದ ತಲೆತಗ್ಗಿಸುವಂತಿವೆ; ಅವರು ಪ್ರತಿನಿಧಿಸುವ ಭಾಷೆಯ ಕಿಮ್ಮತ್ತನ್ನು ಕಳೆಯುವಂತಿವೆ. ಜನಮುಖಿ ವಿಚಾರ ಹಾಗೂ ಕೃತಿಯ ಮೂಲಕ ರಾಜಕಾರಣದಲ್ಲಿ ತಮ್ಮ ಅಸ್ತಿತ್ವ ಪ್ರಕಟಪಡಿಸುವ ಬದಲಾಗಿ, ಮಾತಿನ ಮೂಲಕ ಸುದ್ದಿಯಲ್ಲಿರಲು ಜನಪ್ರತಿನಿಧಿಗಳು ಪ್ರಯತ್ನಿಸುತ್ತಿದ್ದಾರೆ. ಜನರನ್ನು ಒಗ್ಗೂಡಿಸುವುದಕ್ಕಾಗಿ ಮಾತನಾಡುವ ಬದಲು, ಮನಸ್ಸುಗಳನ್ನು ಒಡೆಯುವುದಕ್ಕಾಗಿ ಮಾತನ್ನು ಬಳಸುತ್ತಿದ್ದಾರೆ. ಮಾತಿನ ಘನತೆಯನ್ನು ಕಾಪಾಡಬೇಕಾದ ಹಾಗೂ ಮೌನದ ಮಹತ್ವವನ್ನು ಮನದಟ್ಟು ಮಾಡಿಕೊಡಬೇಕಾದ ಧಾರ್ಮಿಕ ಸಂಸ್ಥೆಗಳ ಮುಖ್ಯಸ್ಥರು ಕೂಡ ‘ಮಾತಿನ ಚಪಲ’ಕ್ಕೆ ಒಳಗಾಗಿರುವಂತಿದೆ.

ಇದು ಮಾತು ಮದ್ದಾಗಿರುವ ಕಾಲ; ಸಿಡಿಮದ್ದಾಗಿರುವ ಕಾಲ. ಇಂಥ ಸಂದರ್ಭದಲ್ಲಿ ಮಾತಿಗೆ ತನ್ನ ಜೀವಪರತೆಯನ್ನು ಮರಳಿ ತಂದುಕೊಡುವ ಉತ್ತರದಾಯಿತ್ವವನ್ನು ಜನಸಾಮಾನ್ಯರೇ ವಹಿಸಿಕೊಳ್ಳಬೇಕಾಗಿದೆ. ಈ ಮಾತಿನ ತುಪಾಕಿಗೆ ಮೊದಲು ತುತ್ತಾಗುವುದು ಸಾಮಾನ್ಯರೇ ಆದುದರಿಂದ, ಮಾತಿನ ಮಹತ್ವ ಉಳಿಸಿಕೊಳ್ಳಬೇಕಾದ ತುರ್ತು ಅವರದೇ ಆಗಿದೆ. ಈ ಪ್ರಯತ್ನಕ್ಕೆ ಸಂಕ್ರಾಂತಿ ಒಂದು ನೆಪವಷ್ಟೇ. ವೈಚಾರಿಕತೆಯನ್ನು ರೂಢಿಸಿಕೊಳ್ಳದ ಹಬ್ಬಗಳು ಜಡವಾಗುತ್ತಾ ಯಾಂತ್ರಿಕವಾಗುತ್ತಾ ಹೋಗುತ್ತವೆ. ಆ ಜಡತೆಯಿಂದ ಸಂಕ್ರಾಂತಿಯನ್ನು ಪಾರು ಮಾಡುವ ಕಾರಣಕ್ಕಾಗಿಯೂ ಮಾತಿಗೆ ಕಾರುಣ್ಯವನ್ನು, ಒಳ್ಳೆಯತನವನ್ನು ತುಂಬುವ ಅಭಿಯಾನವನ್ನು ನಾವು ನಮ್ಮ ನಡುವೆಯೇ ಆರಂಭಿಸಬೇಕು. ಎಳ್ಳು–ಬೆಲ್ಲ ಬೀರಿ ಒಳ್ಳೆಯ ಮಾತನಾಡುವುದನ್ನು ಸಂಪ್ರದಾಯದ ಒತ್ತಡಕ್ಕೆ ಮಾಡದೆ, ಪ್ರಜ್ಞಾಪೂರ್ವಕವಾಗಿ ಮಾಡಬೇಕಾದ ತುರ್ತು ಇಂದಿನದು.

■ ರಘುನಾಥ ಚ.ಹ.


ಈಶ್ವರ್